**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 116/2020**

| | | |
|---|---|---|
| ಸಾಕ್ಷಿದಾರರ ಹೆಸರು | **: ಮನೋಹರ** | *ಪ್ರಮಾಣ ಮಾಡಿದ ದಿನಾಂಕಃ* |
| ತಂದೆ ಹೆಸರು | **: ಶ್ರೀನಿವಾಸ** | **14.02.2023** |
| ವಯಸ್ಸು | **: 29** ವರ್ಷ | |
| ವೃತ್ತಿ | **: ಚಾಲಕ** | **ಪಿಡಬ್ಲ್ಯೂ : 12** |
| ವಾಸ ಸ್ಥಳ | **: ಮೈಸೂರು** | **ಸಿಡಬ್ಲ್ಯೂ : 13** |

*ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದಃ*

**ನನಗೆ ನ್ಯಾಯಾಲಯದೆದುರು ಹಾಜರಿರುವ ಎಲ್ಲಾ ಆರೋಪಿಗಳ ಪರಿಚಯ ಇದೆ. ಅವರು ನಮ್ಮ ಏರಿಯಾದಲ್ಲಿ ಇರುತ್ತಾರೆ. ಮೃತ ಚಿನ್ನಸ್ವಾಮಿ ಕೂಡ ಪರಿಚಯ ಇರುತ್ತಾನೆ. ಅವನು ನಮ್ಮ ಮನೆಯ ಪಕ್ಕದ ವಾಸಿ. ಆತ 4-5 ವರ್ಷದ ಹಿಂದೆ ರಾಘವೇಂದ್ರ ನಗರದ ಸ್ಮಶಾನದ ಬಳಿ ರಾತ್ರಿ ಸಮಯದಲ್ಲಿ ಕೊಲೆಯಾಗಿ ತೀರಿಕೊಂಡಿದ್ದಾನೆ. ನನಗೆ ಬೆಳಿಗ್ಗೆ ಕೊಲೆಯ ವಿಚಾರ ಗೊತ್ತಾಯಿತು. ಆದರೆ ಅವನನ್ನು ಯಾರು ಯಾವುದರಿಂದ ಕೊಲೆ ಮಾಡಿದ್ದರು ಅಂತ ಗೊತ್ತಿಲ್ಲ. 1 ಮತ್ತು 3ರವರು ಕೈಗಳಲ್ಲಿ ಚಾಕು ಮತ್ತು ಪೈಪನ್ನು ಹಿಡಿದುಕೊಂಡಿದ್ದನ್ನು ನಾನು ನೋಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.**

*(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೊಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)*

*ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-*

**2. ನಾನು ಪೊಲೀಸರ ಮುಂದೆ "ದಿನಾಂಕ 11.02.2019ರಂದು ನನ್ನ ಸ್ನೇಹಿತನ ಮನೆಗೆಂದು .......... ರೂಪೇಶರವರುಗಳನ್ನು ನೋಡಿರುತ್ತೇನೆ, ಮತ್ತೆ ನೋಡಿದರೆ ಗುರುತಿಸುತ್ತೇನೆ ಅಂತ ಈಗ ಓದಿ ಹೇಳಿದಂತೆ ನಿಪಿ-12ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ**

**ಸರಿಯಲ್ಲ. ಆರೋಪಿಗಳು ಮತ್ತು ನಾನು ಸ್ನೇಹಿತರಾಗಿದ್ದು, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**ಪಾಟೀ ಸವಾಲು : ಆರೋಪಿಗಳ ಪರ ವಕೀಲರಿಂದಃ- ಇಲ್ಲ**

**ಮರು ವಿಚಾರಣೆಃ- - ಇಲ್ಲ -**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**14.02.2023.**

**[ ಜಿ.ಎಸ್. ಸಂಗ್ರೇಶಿ ]**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು.**